ಓಂ ಶಾಂತಿ, ಬಾಪ್‌ದಾದಾ, ಅವ್ಯಕ್ತ ಮುರಳಿ 09-02-1976.

# *ಬಿಂದುರೂಪ ಸ್ಥಿತಿಯಿಂದ ಪ್ರಾಪ್ತಿ*

(बिन्दु-रूप स्थिति से प्राप्ति)

**ಅವ್ಯಕ್ತಮುರುಳಿಗಳಿಂದ ಆಯ್ಕೆ ಮಾಡಿರುವ ಕೆಲವು ಪ್ರಶೋತ್ತರಗಳು.**

ಪ್ರಶ್ನೆ:- ಎಲ್ಲಾ ಪಾಯಿಂಟ್ಸ್ ಸಾರವನ್ನು ಒಂದು ಶಬ್ದದಲ್ಲಿ ತಿಳಿಸಿ?

ಉತ್ತರ:- ಪಾಯಿಂಟ್‌ಗಳ ಸಾರವಾಗಿದೆ- ಪಾಯಿಂಟ್ಸ್‌ನ ರೂಪವೆಂದರೆ ಬಿಂದುರೂಪವಾಗುವುದು.

ಪ್ರಶ್ನೆ:- ಬಿಂದುರೂಪ ಸ್ಥಿತಿಯಲ್ಲಿ ಸ್ಥಿತರಾಗುವುದರಿಂದ ಯಾವ ಡಬಲ್ ಪ್ರಾಪ್ತಿಯು ಪ್ರಾಪ್ತವಾಗುತ್ತದೆ?

ಉತ್ತರ:- ಬಿಂದುರೂಪ ಅರ್ಥಾತ್ ಶಕ್ತಿಶಾಲಿ ಸ್ಥಿತಿಯಾಗಿದೆ. ಅದರಲ್ಲಿ ವ್ಯರ್ಥಸಂಕಲ್ಪಗಳು ನಡೆಯುವುದಿಲ್ಲ ಮತ್ತು ಬಿಂದುರೂಪ ಅರ್ಥಾತ್ ಕಳೆದುಹೋಗಿರುವುದು ಕಳೆಯಿತು. ಇದರಿಂದ ಕರ್ಮವೂ ಸಹ ಶ್ರೇಷ್ಠವಾಗುತ್ತದೆ ಹಾಗೂ ವ್ಯರ್ಥಸಂಕಲ್ಪವಿರದಿರುವ ಕಾರಣದಿಂದ ಪುರುಷಾರ್ಥದ ಗತಿಯೂ ತೀವ್ರಗೊಳ್ಳುತ್ತದೆ ಆದ್ದರಿಂದ ಕಳೆದುಹೋದದ್ದು ಕಳೆದುಹೋಯಿತು. ವ್ಯರ್ಥವನ್ನು ನೋಡುವುದು, ಕೇಳುವುದು ಹಾಗೂ ಮಾತನಾಡುವುದೆಲ್ಲವೂ ಸಮಾಪ್ತಿ, ಸಮರ್ಥವಾಗಿರುವ ನೇತ್ರಗಳು ತೆರೆದಿರಲಿ ಅರ್ಥಾತ್ ಸಾಕ್ಷಿಸ್ಥಿತಿಯ ಸ್ಥಿತಿಯಲ್ಲಿ ಸ್ಥಿತರಾಗಿರಬೇಕು.

ಪ್ರಶ್ನೆ:- ಕಮಲಪುಷ್ಪದ ಸಮಾನರಾಗಲು ಯುಕ್ತಿಯೇನಾಗಿದೆ?

ಉತ್ತರ:- ಯಾರದೇ ಕೊರತೆಯನ್ನು ನೋಡುತ್ತಾ ಅವರ ವಾತಾವರಣದ ಪ್ರಭಾವದಲ್ಲಿ ಬರಬಾರದು. ಅಂದಮೇಲೆ ಆ ಆತ್ಮನಪ್ರತಿ ದಯೆಯ ದೃಷ್ಟಿ-ವೃತ್ತಿಯಿರಲಿ, ಎದುರಿಸಬಾರದು ಅರ್ಥಾತ್ ಆ ಆತ್ಮನು ತಪ್ಪುಗಳಲ್ಲಿ ಪರವಶನಾಗಿದೆ, ಇವರ ದೋಷವಿಲ್ಲ, ಈ ಸಂಕಲ್ಪದಿಂದ ಆ ವಾತಾವರಣದ ಅಥವಾ ಮಾತುಗಳ ಪ್ರಭಾವವು ತಾವು ಆತ್ಮರಮೇಲೆ ಆಗುವುದಿಲ್ಲ. ಇದಕ್ಕೇ ಕಮಲಪುಷ್ಪ ಸಮಾನ ಭಿನ್ನರಾಗಿರುವುದು ಎಂದು ಹೇಳಲಾಗುತ್ತದೆ.

ಪ್ರಶ್ನೆ:-ಸಫಲತಾಮೂರ್ತಿಯಾಗಲು ಏನು ಮಾಡಬೇಕಾಗಿದೆ?

ಉತ್ತರ:- ಅನ್ಯರನ್ನು ಬದಲಾಯಿಸಬಾರದು. ಆದರೆ ಸ್ವಯಂನ್ನು ಬದಲಾಯಿಸಬೇಕಾಗಿದೆ. ಮಹಾವೀರರಾಗಬೇಕು, ಮಲ್ಲಯುದ್ಧವನ್ನು ಮಾಡಬಾರದು. ಮಲ್ಲಯುದ್ಧವನ್ನು ಮಾಡುವುದು ಎಂದರೆ ಒಂದುವೇಳೆ ಯಾವುದೇ ಮಾತನ್ನು ಹೇಳಿದರೆ ಅವರಪ್ರತಿ - ಇವರೇಕೆ ಮಾಡಿದರು. ಇವರೇಕೆ ಹೇಳಿದರು ಎಂದು ಸಂಕಲ್ಪವು ನಡೆಯತೊಡಗುತ್ತದೆ. ಅವರಿಗೆ ಮನಸ್ಸಿನಿಂದ ಅಥವಾ ವಾಚಾದಿಂದ ಮಲ್ಲಯುದ್ಧವನ್ನು ಮಾಡುವುದು ಎಂದು ಹೇಳಲಾಗುತ್ತದೆ. ನಮನ ಅರ್ಥಾತ್ ಬಾಗುವುದು. ಅಂದಮೇಲೆ ಯಾವಾಗ ನಮನ ಮಾಡುತ್ತೀರಿ. ಆಗಲೇ ನಮನ ಮಾಡುತ್ತಾರೆ. ಈ ರೀತಿ ತಿಳಿಯಬಾರದು, ನಾವಂತು ಸದಾ ಬಾಗುತ್ತಾ ಇರುತ್ತೇವೆ ಆದರೆ ನಮಗೆ

ಯಾವುದೇ ಮಾನ್ಯತೆಯಿಲ್ಲ. ಯಾರು ಬಾಗುವುದಿಲ್ಲ. ಅಥವಾ ಅಸತ್ಯವನ್ನು ಹೇಳುತ್ತಾರೆಯೋ ಅವರಿಗೆ ಮಾನ್ಯತೆಯಿದೆ ಎನ್ನುವಂತಾಗಬಾರದು. ಇದು ಅಲ್ಪಕಾಲದ್ದಾಗಿದೆ ಆದರೆ ಈಗ ದೂರಾದೇಶಿಯ ಬುದ್ಧಿಯನ್ನಿಡಿ, ಇಲ್ಲಿ ಎಷ್ಟು ಬಾಗುತ್ತೀರಿ ಅರ್ಥಾತ್ ನಮ್ರತೆಯ ಗುಣವನ್ನು ಧಾರಣೆ ಮಾಡುತ್ತೀರೆಂದರೆ ಸರ್ವಾತ್ಮರು ಇಡೀಕಲ್ಪದಲ್ಲಿಯೂ ನನ್ನ ಮುಂದೆ ನಮನ ಮಾಡುತ್ತಾರೆ. ಸತ್ಯ-ತ್ರೇತಾಯುಗದಲ್ಲಿ ರಾಜನಿಗೆ ಗೌರವದಿಂದ ಕತ್ತಿನಿಂದ ಅಲ್ಲ ಆದರೆ ಮನಸ್ಸಿನಿಂದ ಬಾಗುತ್ತಾರೆ ಮತ್ತು ದ್ವಾಪರ, ಕಲಿಯುಗದಲ್ಲಿ ಕತ್ತನ್ನು ಬಾಗಿಸುತ್ತಾರೆ. ಒಳ್ಳೆಯದು.